75

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ 2013-14ನೇ ಸಾಲಿನ 3ನೇ ತ್ರೈಮಾಸಿಕ ಯೋಜನಾ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಕೃಇ 16 ಕೃವಿರಾ 2013, ದಿನಾಂಕ: 11-06-2013.
2. ಸರ್ಕಾರದ ಆದೇಶ ಸಂಖ್ಯೆ: ಕೃಇ 16 ಕೃವಿರಾ 2013 ದಿನಾಂಕ: 30-08-2013.
3. ರಾಯಚೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ: 01-10-2013ರ ಪತ್ರ ಸಂಖ್ಯೆ: ಕುಸ/ಕೃವಿವಿರಾ/ಅನುದಾನ/3926/2013-14.

**** *** ****

**ಪ್ರಸ್ತಾವನೆ:-**

2013-14ನೇ ಸಾಲಿನ ಆಯವ್ಯಯದಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಯೋಜನೆ ಅನುದಾನವಾಗಿ ಕೃಷಿ ಸಂಶೋಧನೆ ಲೆಕ್ಕಶೀರ್ಷಿಕೆ 2415-80-004-3-00-101 ಅಡಿಯಲ್ಲಿ ರೂ. 300.00 ಲಕ್ಷಗಳನ್ನು ಮತ್ತು ಕೃಷಿ ಶಿಕ್ಷಣ ಲೆಕ್ಕಶೀರ್ಷಿಕೆ 2415-80-277-3-01-101 ಅಡಿಯಲ್ಲಿ ರೂ. 425.00 ಲಕ್ಷಗಳಂತೆ ಒಟ್ಟು ರೂ. 725.00 ಲಕ್ಷಗಳನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ: 11-06-2013ರ ಆದೇಶದಡಿ ತ್ರೈ ಮಾಸಿಕದ ಬಾಬ್ತು ಬಿಡುಗಡೆ ಮಾಡಿದೆ. ಪರಿಷ್ಕೃತ ಆಯವ್ಯಯದಲ್ಲಿನ ಅನುದಾನ ಹಂಚಿಕೆಯಂತೆ, ಸಂಶೋಧನೆ ಲೆಕ್ಕಶೀರ್ಷಿಕೆಯಡಿ ರೂ. 200.00 ಲಕ್ಷಗಳು ಮತ್ತು ಶಿಕ್ಷಣ ಲೆಕ್ಕಶೀರ್ಷಿಕೆಯಡಿ ರೂ. 368.12 ಲಕ್ಷಗಳಂತೆ ಒಟ್ಟು ರೂ. 568.12 ಲಕ್ಷಗಳನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 30-08-2013ರ ಆದೇಶದಡಿ ಬಿಡುಗಡೆ ಮಾಡಲಾಗಿದೆ.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳು ಮೇಲೆ (3)ರಲ್ಲಿ ಓದಲಾದ ದಿನಾಂಕ: 01-10-2013ರ ಪತ್ರದೊಂದಿಗೆ 2013-14ನೇ ಸಾಲಿನ ಅಭಿವೃದ್ಧಿ (ಯೋಜನೆ) ಅನುದಾನವನ್ನು ಸೆಪ್ಟೆಂಬರ್ 2013ರ ಅಂತ್ಯದಲ್ಲಿ ಖರ್ಚು ಹಾಗೂ ಬಳಕೆ ಮಾಡಿದ ಬಗ್ಗೆ ಪ್ರಮಾಣ ಪತ್ರವನ್ನು ಕಳುಹಿಸಿ 3ನೇ ಕಂತಿನ ತ್ರೈಮಾಸಿಕ ಅವಧಿಗೆ ರೂ. 250.00 ಲಕ್ಷಗಳನ್ನು ಕೃಷಿ ಸಂಶೋದನೆ ಲೆಕ್ಕ ಶೀರ್ಷಿಕೆ 2415-80-004-3-00-101 ಹಾಗೂ ರೂ. 396.565 ಲಕ್ಷಗಳನ್ನು ಕೃಷಿ ಶಿಕ್ಷಣದ ಲೆಕ್ಕ ಶೀರ್ಷಿಕೆ 2415-80-277-3-01-101 ಅಡಿಯಲ್ಲಿ ಒಟ್ಟು ಮೊತ್ತ 646.565 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ 16 ಕೃವಿರಾ 2013, ರಾಯಚೂರು, ದಿನಾಂಕ: 19-11-2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಯೋಜನೆ ಅಡಿಯಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ 2013-14ನೇ ಸಾಲಿಗೆ ಕೃಷಿ ಶಿಕ್ಷಣ ಲೆಕ್ಕಶೀರ್ಷಿಕೆ 2415-80-277-3-01-101 ಅಡಿಯಲ್ಲಿ ಹಂಚಿಕೆ ಮಾಡಲಾದ ರೂ. 1586.25 ಲಕ್ಷಗಳ ಪೈಕಿ 396.565 ಲಕ್ಷಗಳನ್ನು (ಮುನ್ನೂರ ತೊಂಭತ್ತಾರು ಲಕ್ಷ ಹಾಗೂ ಐನ್ನೂರ ಅರವತ್ತೈದು ಸಾವಿರಗಳು ಮಾತ್ರ) ಹಾಗೂ ಕೃಷಿ ಸಂಶೋಧನೆ ಲೆಕ್ಕಶೀರ್ಷಿಕೆ 2415-80-004-3-00-101 ಅಡಿಯಲ್ಲಿ ಹಂಚಿಕೆ ಮಾಡಲಾದ ರೂ. 1000.00 ಲಕ್ಷಗಳ ಪೈಕಿ 250.00 ಲಕ್ಷಗಳನ್ನು (ಇನ್ನೂರ ಐವತ್ತು ಲಕ್ಷಗಳು ಮಾತ್ರ) ಒಟ್ಟು ರೂ. 646.565 ಲಕ್ಷ (ಆರು ನೂರ ನಲವತ್ತಾರು ಲಕ್ಷದ ಐದು ನೂರ ಅರವತ್ತೈದು ಸಾವಿರಗಳು ಮಾತ್ರ) ಗಳನ್ನು ಮೂರನೇ ತ್ರೈಮಾಸಿಕ ಯೋಜನೆ ಅನುದಾನವಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ:-

1. **ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಕಿನಂದು ಅಥವಾ 20ನೇ ತಾರೀಕಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;**
2. **ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;**
3. **ಬಿಡುಗಡೆಯಾದ ಯೋಜನಾನುದಾನದ ಸಂಶೋದನಾ ಪೈಕಿ ಶೇ. 50ರಷ್ಟು ಹಣವನ್ನು ಸಂಶೋದನೆ ಮತ್ತು ಅಭಿವೃದ್ಧಿ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.**
4. **ಸರ್ಕಾರವು ನೀಡಿದ ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;**
5. **ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;**
6. **ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;**

7. **ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.**

2. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಇವರು ಸಲ್ಲಿಸುವ ಮೇಲು ರುಜು ಮಾಡುವ ಅಧಿಕಾರವನ್ನು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು, ಇವರಿಗೆ ನೀಡಲಾಗಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ: 10-05-2013 ಹಾಗೂ 16-11-2013ರ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2013ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

Manjunath P

**(ಮಂಜುನಾಥ್ ಪಾಟೀಲ್)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಕೃಷಿ ಇಲಾಖೆ (ಸೇವೆಗಳು)**
**(ದೂರವಾಣಿ ಸಂಖ್ಯೆ: 080 2203 2344)**

**ಇವರಿಗೆ:-**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 15 ಪ್ರತಿಗಳನ್ನು ಒದಗಿಸಲು.

**ಪ್ರತಿ:-**

1. ಮಹಾಲೇಖಪಾಲರು, ಕರ್ನಾಟಕ, (ಲೆಕ್ಕಪತ್ರ/ತನಿಖೆ) ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
3. ಕೃಷಿ ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
5. ಉಪ ನಿರ್ದೇಶಕರು, ನೆಟ್‌ವರ್ಕ್ ಮೇನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
6. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು.
7. ಜಿಲ್ಲಾ ಖಜಾನಾಧಿಕಾರಿಗಳು, ರಾಯಚೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.